ಕರ್ನಾಟಕ ಸರ್ಕಾರ

ಆಯುಷ್ ಇಲಾಖೆ, ಧನ್ವಂತ್ರಿ ರಸ್ತೆ, ಬೆಂಗಳೂರು-9

ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯುಷ್ ಸ್ನಾತಕೋತ್ತರ ಕೋರ್ಸ್‌ಗಳಿಗೆ 02ನೇ ಸುತ್ತಿನ ಆಯ್ಕೆ ಪ್ರಕಿಯೆ ಪೂರ್ಣಗೊಂಡ ನಂತರ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಖಾಲಿ ಉಳಿದಿರುವ ಸೀಟುಗಳನ್ನು **P.G. AYUSH "MOP-UP"** ಸುತ್ತಿನ ಆಯ್ಕೆ ಪ್ರಕ್ರಿಯೆಯ ಮೂಲಕ ಭರ್ತಿ ಮಾಡುವ ಸಂದರ್ಭದಲ್ಲಿ ನಿಯಮಾನುಸಾರ ಎಲ್ಲಾ ಸೀಟುಗಳನ್ನು ಸಾಮಾನ್ಯ ವರ್ಗಕ್ಕೆ ಪರಿವರ್ತಿಸಿದ ನಂತರ ಹಂಚಿಕೆಗಾಗಿ ಆಯುಷ್ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸ್‌ಗಳ ತಜ್ಞತೆವಾರು ಸೀಟುಗಳಿಗೆ ದಿನಾಂಕ: 23-02-2021 ರಂದು **P.G. AYUSH "MOP-UP"** ಸುತ್ತಿನ ಆಯ್ಕೆ ಪ್ರಕ್ರಿಯೆಯನ್ನು ಏರ್ಪಡಿಸಲಾಗಿದೆ.

ಆಯುಷ್ ಕಾಲೇಜುಗಳಲ್ಲಿನ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಕೆ.ಇ.ಎ.ಯಲ್ಲಿ ಈಗಾಗಲೇ ನೊಂದಾಯಿಸಿರುವ ಆಸಕ್ತ ವಿದ್ಯಾರ್ಥಿಗಳು ಈ ಕೆಳಕಂಡ ಸೂಚನೆಗಳನ್ನು ಪಾಲಿಸಿ P.G. AYUSH "MOP-UP" ಸುತ್ತಿಗೆ ದಿನಾಂಕ: 23-02-2021ರಂದು **ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012** ಇಲ್ಲಿ ಪೂರ್ವಾಹ್ನ 11:00ಗಂಟೆಗೆ ಹಾಜರಾಗತಕ್ಕದ್ದು ಮತ್ತು ಕಡ್ಡಾಯವಾಗಿ AIAPGET-2020ರ ರ್‍ಯಾಂಕ್ ನಮೂದಿಸತಕ್ಕದ್ದು, ತಡವಾಗಿ ಬರುವ ವಿದ್ಯಾರ್ಥಿಗಳಿಗೆ ಅವಕಾಶ ಇರುವುದಿಲ್ಲ.

**<u>P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ನಿಬಂಧನೆಗಳು:-</u>**

1. P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ AIAPGET-2020ರ ರ್‍ಯಾಂಕ್ ಹೊಂದಿರತಕ್ಕದ್ದು ಮತ್ತು KEA ಯಿಂದ ದಾಖಲಾತಿ ಪರಿಶೀಲನೆಯಾಗಿರತಕ್ಕದ್ದು (Verification Slip ಹಾಜರುಪಡಿಸತಕ್ಕದ್ದು).
2. P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ರವರಿಗೆ ಈಗಾಗಲೇ ಮೂಲ ದಾಖಾಲಾತಿಗಳನ್ನು ಸಲ್ಲಿಸಿರುವ ಬಗ್ಗೆ ಸ್ವೀಕೃತಿ ಪತ್ರವನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.
3. AIAPGET-2020ರ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದು ಯಾವುದೇ ಸ್ನಾತಕೋತ್ತರ ಕೋರ್ಸ್‌ಗಳ ತಜ್ಞತೆಗಳಲ್ಲಿ ಯಾವುದೇ ಸೀಟು ಹಂಚಿಕೆಯಾಗದೇ ಇರುವಂತಹ ವಿದ್ಯಾರ್ಥಿಗಳು ಮಾತ್ರ P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿದೆ.
4. P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಸರ್ಕಾರವು ಸರ್ಕಾರಿ ಕೋಟಾ ಸೀಟುಗಳಿಗೆ ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸತಕ್ಕದ್ದು.
5. P.G. AYUSH "MOP-UP" ಸುತ್ತಿನಲ್ಲಿ ಎಲ್ಲಾ ಪದ್ಧತಿಯ ಸೀಟುಗಳನ್ನು AIAPGET-2020ರ ರ್‍ಯಾಂಕ್‌ನ ಜೇಷ್ಠತೆ ಆಧಾರದ ಮೇರೆಗೆ ದಿನಾಂಕ: 23-02-2021ರಂದು ಲಭ್ಯವಿರುವ ಸೀಟುಗಳ ಹಂಚಿಕೆ ಪೂರ್ಣಗೊಳ್ಳುವವರೆಗೆ ಮಾತ್ರ ನಡೆಸಲಾಗುವುದು.
6. P.G. AYUSH "MOP-UP" ಸುತ್ತಿನಲ್ಲಿ ಯಾವುದೇ ಸ್ನಾತಕೋತ್ತರ ಕೋರ್ಸ್‌ಗಳಲ್ಲಿನ ತಜ್ಞತೆವಾರು ಸೀಟು ಹಂಚಿಕೆಯಾದ ನಂತರ ಅಂತಹ ವಿದ್ಯಾರ್ಥಿಗಳು ಕಡ್ಡಾಯವಾಗಿ ಸ್ಥಳದಲ್ಲಿಯೇ ನಿಗಧಿಪಡಿಸಿರುವ ಶುಲ್ಕ ಪಾವತಿಸಬೇಕು. ತಜ್ಞತೆವಾರು ಬದಲಾವಣೆ, ವರ್ಗಾವಣೆ, ಪರಸ್ಪರ ವರ್ಗಾವಣೆ ಮತ್ತು ಆಯ್ಕೆಯಾದ ಸೀಟನ್ನು ರದ್ದುಪಡಿಸಲು ಅವಕಾಶವಿರುವುದಿಲ್ಲ.
7. ಅಭ್ಯರ್ಥಿಗಳು P.G. AYUSH "MOP-UP" ಸುತ್ತಿನಲ್ಲಿ ಭಾಗವಹಿಸಲು ಖುದ್ದಾಗಿ ಹಾಜರಿರಬೇಕು. ಅಂದರೆ, ಅವರ ಪರವಾಗಿ ಬೇರೆ ಯಾರೂ ಹಾಜರಾಗುವಂತಿಲ್ಲ ಅಥವಾ ಅವರ ಪರವಾಗಿ ಬಂದಿರುವ ಯಾರೇ ಪ್ರತಿನಿದಿಗಳಿಗೆ ಹಾಜರಾಗಲು ಅವಕಾಶ ನೀಡುವುದಿಲ್ಲ.

2/-

8. ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿತ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್ ಮುಖಾಂತರ ಪಾವತಿಸಬೇಕು. ಡಿಮ್ಯಾಂಡ್ ಡ್ರಾಫ್ಟ್ ಅನ್ನು " The Executive Director, KEA" ಇವರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದಿರಬೇಕು. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ಡಿಮ್ಯಾಂಡ್ ಡ್ರಾಫ್ಟ್ ಅನ್ನು ಸಲ್ಲಿಸಬಹುದು, ಚೆಕ್ ಮುಖಾಂತರ ಅಥವಾ ನಗದು ಶುಲ್ಕವನ್ನು ಪಾವತಿಸುವಂತಿಲ್ಲ, ಡಿಮ್ಯಾಂಡ್ ಡ್ರಾಫ್ಟ್ ಇಲ್ಲದೇ ಇರುವ ಅಭ್ಯರ್ಥಿಗಳನ್ನು ಸೀಟು ಆಯ್ಕೆ ಮಾಡಲು ಅನುಮತಿಸುವುದಿಲ್ಲ.

9. ಅಭ್ಯರ್ಥಿಗಳು ಸರ್ಕಾರಿ ಕಾಲೇಜುಗಳಲ್ಲಿ ದೊರೆಯುವ ಸೀಟಿಗೆ ರೂ. 50500/- ಹಾಗೂ ಖಾಸಗಿ ಕಾಲೇಜುಗಳಿಗೆ ದೊರೆಯುವ ಸರ್ಕಾರಿ ಕೋಟಾ ಸೀಟುಗಳಿಗೆ ರೂ. 1,00,500/- ಶುಲ್ಕವಿದ್ದು (ರೂ. 50500 + 50,000) ಒಳಗೊಂಡಂತೆ ಬೇರ್ಪಡಿಸಿದ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ

| ಶುಲ್ಕದ ವಿವರ | | |
|---|---|---|
| 1. | ಸರ್ಕಾರಿ ಕಾಲೇಜುಗಳು. | ರೂ. 50,500/- |
| 2. | ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟುಗಳು. | ರೂ. 1,00,500/- |
| 3 | ಆಲ್ ಇಂಡಿಯಾ ಕೋಟಾ ಸೀಟುಗಳು (PVT) | ರೂ. 3,68,000/- |

10. ಆಯುಷ್ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ 02ನೇ ಸುತ್ತಿನ ಆಯ್ಕೆ ಪ್ರಕ್ರಿಯೆ ನಂತರ ಲಭ್ಯವಿರುವ ಸೀಟುಗಳ ವಿವರಗಳನ್ನು ದಿನಾಂಕ: 22-02-2021ರ ಸಂಜೆ 6.00ಗಂಟೆ ನಂತರ ವೆಬ್‌ಸೈಟ್: http://kea.kar.nic.in & www.karnataka.gov.in/ayush/ ನಲ್ಲಿ ಪ್ರಕಟಿಸಲಾಗುವುದು ಅಭ್ಯರ್ಥಿಗಳು ಸೀಟುಗಳ ಲಭ್ಯತೆ ಬಗ್ಗೆ ಖಾತ್ರಿ ಪಡಿಸಿಕೊಂಡು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ತಿಳಿಸಿದೆ.

11. ಆಲ್ ಇಂಡಿಯಾ (PVT) ಕೋಟಾ ಸೀಟುಗಳಿಗೆ ಶುಲ್ಕ ರೂ. 3,68,000/-ಗಳನ್ನು ನಿಗಧಿಪಡಿಸಲಾಗಿದ್ದು, ಆಲ್ ಇಂಡಿಯಾ ಕೋಟಾ ಸೀಟುಗಳಿಗೆ ಆಯ್ಕೆ ಬಯಸುವ ವಿದ್ಯಾರ್ಥಿಗಳು ಪೋಷಕರೊಂದಿಗೆ ಚರ್ಚಿಸಿ ತೀರ್ಮಾನಿಸಿ ಆಯ್ಕೆ ಮಾಡಿಕೊಳ್ಳುವುದು.

12. P.G. AYUSH "MOP-UP" ಸುತ್ತಿನ ದಿನಾಂಕದಂದು ಖಾಲಿ ಉಳಿದಿರುವ ಸೀಟುಗಳಿಗೆ ಈ ಕೆಳಕಂಡಂತೆ ನಿಗಧಿಪಡಿಸಿದ ಸಮಯದ ಒಳಗಾಗಿ ಹಾಜರಿರಬೇಕು. ನಂತರ ಬರುವಂತಹ ವಿದ್ಯಾರ್ಥಿಗಳಿಗೆ ಅವಕಾಶವಿರುವುದಿಲ್ಲ.

| |
|---|
| ಹಾಜರಾಗಬೇಕಾದ ಸಮಯ ಪೂರ್ವಾಹ್ನ 11:00 ಗಂಟೆಗೆ |

20/2/21

ಆಯುಕ್ತರು
ಆಯುಷ್ ಇಲಾಖೆ
ಬೆಂಗಳೂರು